ಇಪ್ಪತ್ತಾರು ಎಂದು ಮಾತನಾಡಿ ಹೋದ ಬೆಳಕಿನ ಕಿಡಿಗಳು ಇವನು ಬರುವ ಸುಳಿವೆ ಕೊಟ್ಟಿದ್ದಾ! ಎಲ್ಲಾ ಚೆನ್ನಾಗಿದ್ದಿದ್ದರೆ, ನಾನಿಂದು ಮತ್ತೆ ಕೆಲಸ ಅರಸಿ ಈ ದಿಕ್ಕಿನೆಡೆಗೆ ಪಯಣಿಸುವ ಅಗತ್ಯವಿರುತ್ತಿರಲಿಲ್ಲ, ಇವನು ಸಿಗುತ್ತಿರಲಿಲ್ಲ, ಇದು ಯಾವುದರ ಮುನ್ಸೂಚನೆಯೊ ನಾ ಕಾಣೆ.

ಮುಖ ತಿರುಗಿಸಿ ಮಲಗಬೇಕೆಂದವಳಿಗೆ ಅವನ ಕಣ್ನೋಟದಿಂದ ತಪ್ಪಿಸಿಕೊಳ್ಳಲು ಆಗಲಿಲ್ಲ ಪ್ರಾರ್ಥನಾಆಆಆ 'ನೀನು ಇಲ್ಲಿ, ಓ ಮೈಗಾಡ್. ಐ ಕಾಂಟ್ ಬಿಲೀವ್ ಇಟ್, ವಾಟ್ ಎ ಸರ್‌ಪ್ರೈಸ್!' ಅವನ ಬಾಯಿಂದ ಈ ಕ್ಷಣದಲ್ಲಿ ಇಂಥ ಮಾತುಗಳು ಸ್ವಾರ್ಥಿ ಎನ್ನಲೇ? ನನ್ನೆಡೆಗಿನ ಅವನ ಪಯಣದ ನೆನಪಿನ ಸಂತೋಷದ ಮಾತೆನ್ನಲೇ? ಅವನ ಮಾತಿಗೆ ಏನೆಂದು ಉತ್ತರಿಸಲಿ? ಷೇಕ್ಸ್‌ಪಿಯರ್ ಹೇಳಿದ್ದ: ನಿಸ್ವಾರ್ಥದಿಂದ ಪ್ರೀತಿಸಬೇಕು ಎಂದು. ಬುದ್ಧನು ಹೇಳಿದ್ದ: ಇತರರಿಂದ ನಿರೀಕ್ಷಿಸಿದಷ್ಟು ನಮಗೆ ನೋವಾಗುತ್ತದೆ. ಇಷ್ಟಕ್ಕೂ ನಾನು ನಿರೀಕ್ಷಿಸಿದ್ದು ಅವನ ಹಿಡಿ ಪ್ರೀತಿ ಅವನು ಬಯಸಿದ್ದು ಅದೇ ಅಲ್ಲವೇ?ಮತ್ತೆ ಯಾಕೆ ಈ ಬಿರುಕುಗಳು.

ಹಲೋ ಪ್ರಾರ್ಥನಾ, 'I am sorry ಕಣೇ ನಿನ್ನ ಹುಡುಕಾಡದ ಜಾಗವೇ ಇಲ್ಲ, ನಿನ್ ಹುಡುಕೋಕೆ ನಾನೆಷ್ಟು ಪ್ರಯತ್ನಿಸಿದಿನಿ, ನಂಬರ್ ಕೂಡಾ ಬದಲಾಯಿಸಿದ್ದಿಯಾ. ಮನೆ ಕೂಡ ಶಿಫ್ಟ್ ಮಾಡಿದ್ದಿಯಾ. ಫ್ಯಾಮಿಲಿ ಕೂಡ ಶಿಫ್ಟ್ ಆಗಿದೆ. ನಾನು ಬರೊವರೆಗೂ ಕಾಯಬಾರದಿತ್ತೆ. ಹೋಗ್ಲಿ ಬಿಡು ಫೈನಲೀ ಥ್ಯಾಂಕ್‌ಗಾಡ್ ನನಗಿನ್ನೇನು ಬೇಡ. ಸಾಕು ನನ್ನ ಜೀವಕ್ಕೆ ನೀನು ಸಿಕ್ಕಿದಿಯಲ್ಲ'. ಅವನ ಕಣ್ಣಂಚಲಿ ನೀರು. ಇವನ ಮಾತಿಗೆ ಮಲಗಿದ್ದವರೆಲ್ಲಾ ಎದ್ದು ಕೂತರು. ಪಿಳಿ ಪಿಳಿ ಕಣ್ಣು ಬಿಡುತ್ತಾ, ನಮ್ಮನ್ನೇ ನೋಡತೊಡಗಿದರು. ಇದು ಒಂದು ಬಾಕಿಯಿತ್ತು. ಪಟಾರನೇ ಹೊಡೆಯಬೇಕೆಂದುಕೊಂಡೆ. ಈಡಿಯಟ್, ನೀನೊಬ್ಬ ಮೋಸಗಾರ ಎನ್ನಬೇಕೆಂದುಕೊಂಡೆ. ಆದರೆ ಅವನು ನಿಜವಾಗಲೂ ಮೋಸಗಾರನಲ್ಲ, ಮನಸ್ಸು ಎಚ್ಚರಿಸುತ್ತಿತ್ತು. ಅವನೊಳಗಿನ ನಿನ್ನೆಡೆಗಿನ ಪಯಣ ಇನ್ನೂ ನಿಂತಿಲ್ಲ. ಅವನಿಗೂ ಫ್ಯಾಮಿಲಿ ಅಂತಿದೆ, ಏನೊ ತೊಂದರೆಯಾಗಿ ಆಗ ನಿರಾಕರಿಸಿ ಹೋಗಿರಬೇಕು ಅಥವಾ ನಾನೇ ತಪ್ಪು ತಿಳಿದೆನೋ ಗೊತ್ತಿಲ್ಲ. ಎಲ್ಲದಕ್ಕೂ



ಉತ್ತರ ಸಿಗಬಹುದು, ಸಿಗದಿರಲೂಬಹುದು. ಎದುರಿಸಲು ಸಿದ್ದರಾಗಿರಬೇಕಷ್ಟೆ, ನನ್ನ ಬುದ್ಧಿಗೇನಾಗಿತ್ತೋ ಅವನ ಕುರಿತು ಯೋಚಿಸಿ ನಾನೇ ನಿರ್ಧಾರ ತೆಗೆದುಕೊಂಡೆ, ಜೊತೆಗಿದ್ದ ಐದು ವರ್ಷದಲ್ಲಿ ಒಂದೇ ಒಂದು ದಿನವೂ ಜಗಳವಾಡಲಿಲ್ಲ. ಒಂದೇ ಹಾಸಿಗೆ, ಒಂದೇ ಹೊದಿಕೆ, ಒಟ್ಟಿಗೆ ಊಟ, ಒಟ್ಟಿಗೆ ಶಾಪಿಂಗ್, ಟೀ ಮಾಡೊದ್ರಿಂದ ಹಿಡಿದು ಎಲ್ಲದರಲ್ಲೂ ಸಮಪಾಲು ಸಮಬಾಳು- ಹೀಗಿದ್ದ ನಾವು ಕಾರಣವೇ ಇಲ್ಲದೇ ಐದು ವರ್ಷ ದೂರವಾಗಿ ಬಿಟ್ಟೆವಿ, ಅವನಿಗೆ ನಾನು ಉಸಿರುಗಟ್ಟಿಸಿದೆನಾ ನನ್ನ ನಿರಾಕರಿಸಲು ಹೀಗೆ ಮಾಡಿದನಾ? ಅಥವಾ ಸಂಬಂಧಗಳಲ್ಲಿ ಅರ್ಥ ಕಂಡುಕೊಳ್ಳುವಲ್ಲಿ ಇಬ್ಬರೂ ಸೋತೆವಾ? ಸೋತಿದ್ದು ಅವನಾದರೂ ಎಲ್ಲರ ದೃಷ್ಟಿಯಲ್ಲಿ ಸೋತವಳು ನಾನಾದೆ, ಹೆಣ್ಣಲ್ಲವೇ...

ಯೋಚಿಸಿದಷ್ಟು ಹಳೆ ಯೋಚನೆಗಳು ಕಾಡತೊಡಗಿದವೇ ಹೊರತು, ಹೊಸ ಯೋಚನೆ, ನಿರ್ಧಾರ ಮಾಡಲು ಆಗುತ್ತಿಲ್ಲ. 'ಪ್ರಾರ್ಥನಾ..... ಪ್ರಾರ್ಥನಾ.....' ನನ್ನೆದುರು ಮಂಡಿಯೂರಿ ಕುಳಿತು ಬಿಕ್ಕುತ್ತಿರುವ ಅವನಿಗೆ ಏನೆಂದು ಮಾತನಾಡಲಿ,